<u>ದಿನಾಂಕಃ 10.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಸುಮಾರು 20 ವರ್ಷಗಳಿಂದ ಆರೋಪಿ ಪರಿಚಯವಿರುತ್ತಾರೆ. ಆರೋಪಿ ಕಾರ್ಖಾನೆಯನ್ನು ನಡೆಸುತ್ತಿದ್ದರು. ಆರೋಪಿ ಯಾವುದೇ ಕಾರ್ಖಾನೆ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸೌದಾಮಣಿ ಚೌಟರಿಯ ಬಳಿ ಕೋಣನಕುಂಟೆಯಲ್ಲಿ ವಾಸವಾಗಿರುತ್ತಾರೆ. ಆರೋಪಿಯ ಮನೆ ನಂಬರ್ ಮತ್ತು ಸಂಪೂರ್ಣ ವಿಳಾಸ ತಿಳಿದಿದೆಯೇ ಎಂದರೆ ಸಾಕ್ಷಿಯು ಸ್ಥಳಕ್ಕೆ ಹೋದಲ್ಲಿ ನಾನು ತೋರಿಸುತ್ತೇನೆ ಆದರೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ನಮೂದಿಸಿರುವ ಆರೋಪಿಯ ವಿಳಾಸವನ್ನು ಯಾವ ಆಧಾರದಲ್ಲಿ ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ಈಮೊದಲು ನಾನು ಮತ್ತು ಆರೋಪಿ ಕೋಣನಕುಂಟೆಯಲ್ಲಿ ವಾಸವಾಗಿದ್ದೆವು ಆ ಕಾರಣ ಆರೋಪಿ ವಿಳಾಸ ತಿಳಿದಿದ್ದು ಪಿರ್ಯಾದಿನಲ್ಲಿ ನಮುದಿಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ಎಂದಿಗೂ ಸಹ ಪಿರ್ಯಾದಿನಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ.

**2.** ನಾನು ಬಿ.ಎ ಪದವೀಧರಳಾಗಿದ್ದೇನೆ. ನಾನು ಹಿಂದೆ ಡ್ರೈವಿಂಗ್ ಸ್ಕೂಲ್ ನಡೆಸುತ್ತಿದ್ದೆನು. ಈಗ ಮಕ್ಕಳಿಗೆ ಟ್ಯೂಶನ್ ಮಾಡುತ್ತೇನೆ ಹಾಗೂ ಸಂಗೀತ ಹೇಳಿಕೊಡುತ್ತೇನೆ. ನಾನು ಡ್ರೈವಿಂಗ್ ಸ್ಕೂಲ್ ನಡೆಸುತ್ತಿದ್ದ ಬಗ್ಗೆ ದಾಖಲೆಗಳಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಡ್ರೈವಿಂಗ್ ಸ್ಕೂಲ್ ಅನ್ನು ನಿಲ್ಲಿಸಿ ಸುಮಾರು ಐದು ವರ್ಷಗಳಾಗಿರಬಹುದು. ಡ್ರೈವಿಂಗ್ ಸ್ಕೂಲ್ ನಿಂದ ತಿಂಗಳಿಗೆ 15 ರಿಂದ 20 ಸಾವಿರ ರೂ. ಆದಾಯವಿತ್ತು. ಡ್ರೈವಿಂಗ್ ಸ್ಕೂಲ್ ನಿಲ್ಲಿಸಿದ ಮೇಲೆ ನೀವು ಯಾವುದೇ ಕೆಲಸ ಮಾಡುತ್ತಿಲ್ಲ ಹಾಗೂ ನಿಮಗೆ ಯಾವುದೇ ಆದಾಯವಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮಕ್ಕಳಿಗೆ ಟ್ಯೂಶನ್ ಹಾಗೂ ಸಂಗೀತ ತರಗತಿ ನಡೆಸುತ್ತೇನೆ ಅದರಿಂದ ತಿಂಗಳಿಗೆ 25 ಸಾವಿರ

ಆದಾಯವಿದೆ. ನಾನು ಆದಾಯ ತೆರಿಗೆ ಪಾವತಿದಾರಳಾಗಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಆರೋಪಿಗೆ ಹಣ ನೀಡಿರುವ ಬಗ್ಗೆ ನನ್ನ ತೆರಿಗೆ ಪಾವತಿಯಲ್ಲಿ ನಮೂದಿಸಿಕೊಂಡಿರುವುದಿಲ್ಲ. ನೀವು ಆರೋಪಿಗೆ ಯಾವುದೇ ರೀತಿ ಹಣ ನೀಡದ ಕಾರಣ ಅದನ್ನು ತೆರಿಗೆ ಪಾವತಿಯಲ್ಲಿ ನಮೂದಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**3.** ಆರೋಪಿಯು ದಿ.10.02.2022 ರಂದು ನಮ್ಮ ಮನೆಗೆ ಬಂದು ಹಣ ಕೇಳಿದ್ದರು. ಆರೋಪಿ ಅವರ ತಾಯಿ ಬ್ಲಡ್ ಕ್ಯಾನ್ಸರ್ ಇರುವ ಕಾರಣ ಹಣದ ಅವಶ್ಯಕತೆ ಇದೆ ಎಂದು ನನ್ನ ಬಳಿ ಹಣ ಕೇಳಿದ್ದರು. ನಾನು ಆರೋಪಿಗೆ ದಿ.15.02.2022 ರಂದು 5 ಲಕ್ಷ ರೂ. ಮತ್ತು ದಿ.20.02.2022 ರಂದು 5 ಲಕ್ಷ ರೂ. ಹಣ ನೀಡಿದ್ದೆನು. ಉತ್ತರಹಳ್ಳಿಯಲ್ಲಿ 12 ಮನೆಗಳಿದ್ದು ಅವುಗಳಿಂದ ಬಂದಂತಹ ಆದಾಯವನ್ನು ಇಟ್ಟುಕೊಂಡಿದ್ದೆನು. ಆ ಆದಾಯವನ್ನು ನನ್ನ ತೆರಿಗೆ ಪಾವತಿ ವರದಿಯಲ್ಲಿ ನಮೂದಿಸಿಕೊಂಡಿರುತ್ತೇನೆ. ಉತ್ತರಹಳ್ಳಿಯ ಅಬ್ಬಯಪ್ಪ ಲೇಔಟ್‌ನಲ್ಲಿ ನಮ್ಮ ಮನೆಗಳಿವೆ. ಆ ಮನೆಗಳು ನನ್ನ ಹೆಸರಿನಲ್ಲಿವೆ. ಅದರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.